ವನಸ್ಪತಿ

# ಸಂದುಬಳ್ಳಿ

■ ಚಿತ್ರ–ಬರಹ:

**ಗೀತಸದಾ ಮೋಂತಿಮಾರು**







ಸಂದುಬಳ್ಳಿ, ಸಂದಕದ ಗಿಡ, ಮಂಗರವಳ್ಳಿ ಎಂದು ಕರೆಯುವ ಈ ಬಳ್ಳಿಗೆ ಮುರಿದ ಮೂಳೆಗಳನ್ನು ಜೋಡಿಸುವ ಅದ್ಭುತ ಗುಣವಿದೆ. ನೆರಲೆಕುಡಿ ಎಂದೂ ಹೆಸರಿರುವ ಕ್ಯಾಕ್ಟಸ್ ಜಾತಿಗೆ ಸೇರಿರುವ ಇದೊಂದು ಬಳ್ಳಿಗಿಡ. ಸಂಸ್ಕೃತದಲ್ಲಿ 'ಅಸ್ಥಿಶೃಂಕಲ' ಎಂದು ಕರೆಯುವ ಇದಕ್ಕೆ ಆಂಗ್ಲ ಭಾಷೆಯಲ್ಲಿ 'ಬೋನ್‌ಸೆಟ್ಟರ್' ಎಂಬ ಹೆಸರಿದೆ. ವೈಟೇಸಿ ಎಂಬ ಕುಟುಂಬಕ್ಕೆ ಸೇರಿದ ಇದರ ವೈಜ್ಞಾನಿಕ ಹೆಸರು ಕ್ವಾಡ್ರಾಂಗ್ಯುಲ್ಯಾರಿಸ್.

ಬೇರೆ ಗಿಡಗಳನ್ನು ಆಶ್ರಯಿಸಿ ಬೆಳೆಯುವ ಇದರ ಕಾಂಡವು ಮುರಿದ ಮೂಳೆಗಳನ್ನು ಜೋಡಿಸಿದ ರೀತಿಯ ಆಕಾರವನ್ನೇ ಹೊಂದಿದೆ. ಹಸಿರು ಬಣ್ಣದ ಕಾಂಡವು ಮೃದುವಾಗಿ ರಸಭರಿತವಾಗಿದ್ದು ಚಪ್ಪಟೆಯಾಗಿ ಚೌಕಾಕಾರದಿಂದ ಇದೆ. ಕಾಂಡದ ಮೇಲೆ ಸುಮಾರು ಎರಡು ಅಂಗುಲ ಅಂತರದಲ್ಲಿ ಗಿಣ್ಣು ಕಂಡು ಬರುತ್ತದೆ. ಪ್ರತೀ ಗಿಣ್ಣಿನಲ್ಲಿಯೂ ಚಿಕ್ಕ ಹೃದಯದಾಕಾರದ ಹಸಿರೆಲೆಯನ್ನು ಕಾಣಬಹುದು. ಸಾಮಾನ್ಯವಾಗಿ ಜುಲೈ ತಿಂಗಳಿನಲ್ಲಿ ಈ ಬಳ್ಳಿಯಲ್ಲಿ ಹೂವು ಬಿಡುತ್ತದೆ. ಮೃದುಕಾಂಡದ ತುಂಡುಗಳಿಂದ ಇದರ ಸಸ್ಯಾಭಿವೃದ್ಧಿ ನಡೆಯುತ್ತದೆ.

ಈ ಬಳ್ಳಿಯನ್ನು ಹಪ್ಪಳದ ಖಾರಕ್ಕೆ ಹೆಚ್ಚಾಗಿ ಉಪಯೋಗಿಸುತ್ತಾರೆ. ಮಂಗರವಳ್ಳಿಯ ಕಾಂಡವನ್ನು ಸಿಪ್ಪೆ ತೆಗೆದು ಸಣ್ಣಗೆ ಹೆಚ್ಚಿಕೊಂಡು ಸ್ವಲ್ಪ ತುಪ್ಪ ಸೇರಿಸಿ ಬಾಣಲೆಯಲ್ಲಿ ಜೀರಿಗೆಯೊಂದಿಗೆ ಬಾಡಿಸಬೇಕು. ತೆಂಗಿನ ತುರಿ ಮತ್ತು ಹಸಿ ಮೆಣಸಿನಕಾಯಿ ಸೇರಿಸಿ ನುಣ್ಣಗೆ ರುಬ್ಬಿ ಮಜ್ಜಿಗೆ ಸೇರಿಸಿ ತಂಬುಳಿ ಮಾಡಿ ಉಪಯೋಗಿಸಬಹುದು. ಅಥವಾ ಈರುಳ್ಳಿ, ಹಸಿಮೆಣಸಿನೊಂದಿಗೆ ಎಣ್ಣೆ ಹಾಕಿ ಬಾಡಿಸಿ ತೆಂಗಿನ ತುರಿಯೊಡನೆ ರುಚಿಗೆ ತಕ್ಕಷ್ಟು ಉಪ್ಪು ಸೇರಿಸಿ ರುಬ್ಬಿ ಚಟ್ನಿ ಮಾಡಿ ಸೇವಿಸುವುದರಿಂದ ಕೆಮ್ಮು–ನೆಗಡಿಗೆ ಬಹಳ ಹಿತಕಾರಿ.

★ ನಾಟಿ ವೈದ್ಯರು ಮೂಳೆ ಮುರಿದಾಗ ಮಂಗರವಳ್ಳಿಯ ಕಾಂಡವನ್ನು ಜಜ್ಜಿ ಮುರಿದ ಭಾಗಗಳಿಗೆ ಪಟ್ಟಿ ಕಟ್ಟಲು ಉಪಯೋಗಿಸುತ್ತಾರೆ.

★ ಈ ಬಳ್ಳಿಯನ್ನು ಉಪಯೋಗಿಸಿ ತಯಾರಿಸಿದ ಎಣ್ಣೆಯು ಮೂಳೆ ಮುರಿತದ ನೋವು ಮತ್ತು ಸೆಳೆತದ ಉಪಶಮನಕ್ಕೆ ಬಳಕೆಯಾಗುತ್ತದೆ.

★ ಶೀತ, ಕೆಮ್ಮು ಇತ್ಯಾದಿ ಸಮಸ್ಯೆಗಳಿಗೆ ಈ ಬಳ್ಳಿಯ ಕಷಾಯ ಸೇವಿಸುತ್ತಾರೆ.

★ ಒಣಗಿದ ಕಾಂಡದ ಪುಡಿಯಿಂದ ತಯಾರಿಸಿದ ಕಷಾಯದ ಸೇವನೆ ಮೂತ್ರಕಟ್ಟಿನ ಸಮಸ್ಯೆಗೆ ಉತ್ತಮ ಪರಿಹಾರ.

★ ಕಾಂಡದ ರಸವನ್ನು ಕಣ್ಣಿನಲ್ಲಿ ಉಂಟಾಗುವ ಇನ್‌ಫೆಕ್ಷನ್‌ನ ತೊಂದರೆಯ ಪರಿಹಾರಕ್ಕಾಗಿ ಉಪಯೋಗಿಸುವರು.

★ ಮೂಲವ್ಯಾಧಿಯ ಮೊಳಕೆಗೆ ಮಂಗರವಳ್ಳಿಯ ಕಾಂಡವನ್ನು ಜಜ್ಜಿ ಲೇಪಿಸಬೇಕು ಹಾಗೂ ರಸಕ್ಕೆ ಜೇನು ಸೇರಿಸಿ ಸೇವಿಸಬೇಕು.

★ ಶರೀರದಲ್ಲಿ ಗಾಯಗಳಾದಾಗ ಅಥವ ಕಜ್ಜಿ, ತುರಿಕೆ ಇತ್ಯಾದಿ ಚರ್ಮರೋಗಗಳಿಗೆ ಈ ಬಳ್ಳಿಯ ರಸವನ್ನು ಲೇಪಿಸುತ್ತಾರೆ. ಹೊಟ್ಟೆಗೂ ಇದನ್ನು ಸೇವಿಸುವುದರಿಂದ ಬಹಳ ಪ್ರಯೋಜನ ಕಾಣಬಹುದು.

ಈ ಎಲ್ಲ ಗುಣಗಳನ್ನು ಆಯುರ್ವೇದ ವೈದ್ಯರು ದೃಢೀಕರಿಸುತ್ತಾರೆ.

ಮಂಗರವಳ್ಳಿ ಬಳ್ಳಿಯು ಎಲ್ಲಾ ಮಣ್ಣಿನಲ್ಲೂ ರೋಗ ಕೀಟಗಳ ಬಾಧೆಗಳಿಲ್ಲದೇ ಬಹಳ ಸುಲಭವಾಗಿ ಬೆಳೆಯುತ್ತದೆ. ಕ್ಯಾಕ್ಟಸ್‌ನಂತೆ ಕಾಣುವ ಈ ಬಳ್ಳಿಯು ಬೇರೆ ಗಿಡಗಳನ್ನು ಆಶ್ರಯಿಸಿ ಸುಮಾರು ಹದಿನೈದರಿಂದ ಇಪ್ಪತ್ತು ಅಡಿ ಉದ್ದ ಬೆಳೆಯಬಲ್ಲದು. ಹಿತ್ತಲಲ್ಲಿ, ಕೈತೋಟದಲ್ಲಿ ಯಾವುದಾದರೂ ಇತರ ಸಸ್ಯಗಳಿಗೆ ಹಬ್ಬಿಸಿ ಬೆಳೆಸಬಹುದು. ತೂಗು ಕುಂಡಗಳಲ್ಲಿಯೂ ಅಲಂಕಾರದಂತೆ ಬೆಳೆಸಿ ಉಪಯೋಗಿಸಬಹುದು.